ಬೆಂಗಳೂರಿನಲ್ಲಿ ನಿರ್ಮಿಸುತ್ತಿರುವ ಅಸಮರ್ಪಕ ಪಾದಚಾರಿ ರಸ್ತೆಯ ಕಾಮಗಾರಿ ಕುರಿತು

13 (67) : ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ಶಿವಾಜಿನಗರ) ಮಾನ್ಯ ಬೆಂಗಳೂರು ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಫುಟ್‌ಪಾತ್‌ಗಳಿಗೆ ಸಿಮೆಂಟ್ ಬ್ಲಾಕ್‌ಗಳನ್ನು ಉಪಯೋಗಿಸಿ ನಿರ್ಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಫುಟ್‌ಪಾತ್ ನಿರ್ಮಾಣಕ್ಕಾಗಿ ಇದುವರೆಗೆ ಖರ್ಚು ಮಾಡಿದ ಹಣವೆಷ್ಟು;

ಇ) ಈಗಾಗಲೇ ನಿರ್ಮಿಸಿರತಕ್ಕ ಈ ಫುಟ್‌ಪಾತ್ ಸಿಮೆಂಟ್ ಚಪ್ಪಡಿಗಳು ಕುಸಿದುಹೋಗಿ ಹಳ್ಳ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಕಳಪೆ ಕಾಮಗಾರಿಯ ಗುತ್ತಿಗೆಯನ್ನು ಯಾರಿಗೆ ನೀಡಲಾಗಿದೆ;

ಉ) ಈ ಕಳಪೆ ಕಾಮಗಾರಿಯಿಂದ ಆಗಿರುವ ನಷ್ಟವನ್ನು ಭರ್ತಿ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ರಾಮಲಿಂಗಾರೆಡ್ಡಿ (ಬೆಂಗಳೂರು ಅಭಿವೃದ್ಧಿ ಸಚಿವರು)

ಅ) ಬಂದಿದೆ.

ಆ) ರೂ. 795.00 ಲಕ್ಷಗಳು

ಇ) ನಿರ್ಮಿಸಿರುವ ಫುಟ್‌ಪಾತ್‌ಗಳಲ್ಲಿ ಕೆಲವು ಕಡೆ ಓ.ಎಫ್.ಸಿ. ಸಂಸ್ಥೆಯವರು ಅಗೆದಿರುವ ಭಾಗಗಳಲ್ಲಿ ಹಳ್ಳ ಬಿದ್ದಿರುವುದನ್ನು ಗಮನಿಸಿದ್ದು, ಈ ರೀತಿ ಅಗೆದಿರುವ ಫುಟ್‌ಪಾತ್‌ಗಳ ಸಿಮೆಂಟ್ ಬ್ಲಾಕ್‌ಗಳನ್ನು ಓ.ಎಫ್.ಸಿ. ಸಂಸ್ಥೆಯ ಮೂಲಕ ಸರಿಪಡಿಸಲಾಗಿದೆ.

ಈ) ಫುಟ್‌ಪಾತ್ ಅಭಿವೃದ್ಧಿ ಕಾಮಗಾರಿಯನ್ನು ಕರ್ನಾಟಕ ಭೂಸೇನಾ ನಿಗಮದವರಿಗೆ ನೀಡಲಾಗಿದೆ.

ಉ) ಕಾಮಗಾರಿಯನ್ನು ವಿಶಿಷ್ಟ ವಿವರಣೆಗಳ ಪ್ರಕಾರ ಮಾಡಿ ಗುಣಮಟ್ಟವನ್ನು ಕಾಪಾಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ನಡೆಯುತ್ತಿರುವ ರೈತರ ಆತ್ಮಹತ್ಯೆ ಪ್ರಕರಣ ಕುರಿತು

14 (167) : ಶ್ರೀ ಎಸ್. ರವೀಂದ್ರನಾಥ (ಮಾಯಕೊಂಡ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ತೀಚೆಗೆ ನಡೆಯುತ್ತಿರುವ ರೈತರ ಆತ್ಮಹತ್ಯೆ ಪ್ರಕರಣಗಳ ವಿಚಾರಣೆ ತನಿಖೆಗೆ ಮಾನವ ಹಕ್ಕು ಆಯೋಗ ತಯಾರಿ ನಡೆಸಿದೆಯೇ;

ಆ) ಮಾನವ ಹಕ್ಕು ಆಯೋಗದ ತನಿಖೆಗೆ ಸರ್ಕಾರದ ಸಮ್ಮತಿ ಇದೆಯೇ;

ಇ) ಈ ತನಿಖೆಯನ್ನು ಆಯೋಗವು ಸ್ವತ: ಮಾಡಬಹುದೇ ಅಥವಾ ಆಯೋಗಕ್ಕೆ ಯಾರಾದರೂ ದೂರು ನೀಡಬೇಕೆ;

ಈ) ಕೊಪ್ಪಳದ ಸಾಮೂಹಿಕ ಆತ್ಮಹತ್ಯೆ ಪ್ರಕರಣದ ಕುರಿತು ಆಯೋಗಕ್ಕೆ ದೂರು ನೀಡಿರುವವರು ಯಾರು; ಆಯೋಗದ ತನಿಖೆ ಕಾರ್ಯ ಪ್ರಗತಿಯಲ್ಲಿದೆಯೇ? (ವಿವರನೀಡಿ)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಈ ಬಗ್ಗೆ ಸರ್ಕಾರದಲ್ಲಿ ವರದಿ ಸ್ವೀಕೃತಿಯಾಗಿರುವುದಿಲ್ಲ.